ಶ್ರದ್ಧಾಂಜಲಿ ಸಲ್ಲಿಸಿದವು. ಪ್ರವಾಸೋದ್ಯಮವನ್ನೇ ನೆಚ್ಚಿಕೊಂಡಿರುವ ಪಹಲ್ಗಾಮ್ ಮನಸ್ಸುಗಳಿಗೆ ಚೇತನ ನೀಡಲು ನಾವು ಬಂದಿದ್ದೇವೆ ಎಂದು ಸಾರಿ ಸಾರಿ ಹೇಳಿದವು. ಇದೆಲ್ಲ ನಡೆದದ್ದು ನವೆಂಬರ್ 22ರಂದು. ಏಳು ತಿಂಗಳ ಹಿಂದಿನ ಇದೇ ದಿನ ಅಲ್ಲಿ ಬಂದೂಕುಗಳು ಆರ್ಭಟಿಸಿದ್ದವು. ಆದರೆ, ಅದೇ ಏಳು ತಿಂಗಳ ಅದೇ ದಿನ, ಭರವಸೆಯ ಆಶಾಕಿರಣ ಅಲ್ಲಿ ಪ್ರಕಾಶಮಾನವಾಗಿತ್ತು.



ಉಗ್ರರ ದಾಳಿಯಲ್ಲಿ ಮಡಿದವರ ಸ್ಮಾರಕ

ಗ್ರೇಟರ್ ಬೆಂಗಳೂರು ಪ್ರಾಧಿಕಾರ– ನಗರ ಪಾಲಿಕೆಗಳ ಅಧಿಕಾರಿ– ನೌಕರರ ಕ್ಷೇಮಾಭಿವೃದ್ಧಿ ಸಂಘ ಈ ಬಾರಿ ಕನ್ನಡ ರಾಜ್ಯೋತ್ಸವವನ್ನು ಪಹಲ್ಗಾಮ್‌ನಲ್ಲಿ ಆಚರಿಸಿತು. ‘ಉಗ್ರರ ದಾಳಿಯ ಸಂದರ್ಭದಲ್ಲಿ ಕಾಶ್ಮೀರದ ಶ್ರೀನಗರಕ್ಕೆ ಬಂದಿಳಿಯಬೇಕಿದ್ದ ವಿಮಾನ ಅಲ್ಲಿ ಇಳಿಯಲಿಲ್ಲ. ಬೇರೆಡೆ ನಮ್ಮನ್ನು ಕೊಂಡೊಯ್ದಿತು. ಆಗ ನಮ್ಮ ಯೋಜನೆ ಬದಲಾಯಿತು. ಕಿಚ್ಚು ಹುಚ್ಚೆಬ್ಬಿಸಿ, ಉಗ್ರರು ದಾಳಿ ನಡೆಸಿದ ಪಹಲ್ಗಾಮ್‌ನಲ್ಲೇ ಕರ್ನಾಟಕ ರಾಜ್ಯೋತ್ಸವ ಆಚರಿಸಿ, ಮಡಿದವರಿಗೆ ಕನ್ನಡಿಗರು ಶ್ರದ್ಧಾಂಜಲಿ ಸಲ್ಲಿಸಬೇಕು ಎಂದು ನಿರ್ಧರಿಸಿದೆವು. ಆರು ತಿಂಗಳ ಪರಿಶ್ರಮದಿಂದ, ಕರ್ನಾಟಕ, ಕನ್ನಡ, ಕನ್ನಡಿಗರ ಶಕ್ತಿ ಪಹಲ್ಗಾಮ್‌ನಲ್ಲಿ ಅನಾವರಣಗೊಂಡು, ಕಾರ್ಯಕ್ರಮ ಯಶಸ್ಸು ಗಳಿಸಿತು’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಹೇಳುವಾಗ ಅವರ ಕಣ್ಣಲ್ಲಿ ಹೊಳಪಿತ್ತು. ಉಗ್ರರಿಗೆ ಎದಿರೇಟು ನೀಡಿ, ಸ್ಥಳೀಯ ಜನರಿಗೆ ಪ್ರವಾಸೋದ್ಯಮ ಚಿಗುರುವ ಕನಸು ಬಿತ್ತಿದ ತೃಪ್ತಿ ಕಾಣುತ್ತಿತ್ತು.


ಎ. ಅಮೃತ್‌ರಾಜ್

ನಿಜ, ಕರ್ನಾಟಕದ ಹೊರಗೆ, ಬೆಂಗಳೂರಿನಿಂದ ಸುಮಾರು ಮೂರು ಸಾವಿರ ಕಿಲೋಮೀಟರ್ ದೂರಕ್ಕೆ ಹೋಗಿ, ದೇಶದ ಗಡಿಯಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುವುದು ಸಾಹಸವೇ ಸರಿ. ಕರ್ನಾಟಕ ರಾಜ್ಯೋತ್ಸವ ಕನ್ನಡಿಗರ ಸಂಭ್ರಮ. ಅಂತಹ ಸಂಭ್ರಮಕ್ಕೆ ಪಹಲ್ಗಾಮ್‌ನಲ್ಲಿ ಕನ್ನಡಿಗರೇ ಇರಬೇಕಲ್ಲವೇ? ಅದಕ್ಕೇ ಅಮೃತ್‌ರಾಜ್ ಅವರು ಯೋಜನೆಯೊಂದನ್ನು ಸಿದ್ಧಪಡಿಸಿದ್ದರು.

ನಗರ ಪಾಲಿಕೆಗಳ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಪಹಲ್ಗಾಮ್‌ನಲ್ಲಿ ನಡೆಯುವ ಕರ್ನಾಟಕ ರಾಜ್ಯೋತ್ಸವಕ್ಕೆ ಬರಬಹುದು. ಜೊತೆಗೆ, ಕಾಶ್ಮೀರ ಸುತ್ತಾಟವೂ ಇರುತ್ತದೆ ಎಂಬ ಸುತ್ತೋಲೆ ಹೊರಡಿಸಿದ್ದರು. ಉಗ್ರರ ಭೀತಿಯಿಂದ ನಲುಗಿ ಹೋಗಿದ್ದ ಪಹಲ್ಗಾಮ್‌ನಲ್ಲಿ ಪ್ರವಾಸಿಗರಲ್ಲಷ್ಟೇ ಅಲ್ಲ, ಸ್ಥಳೀಯರಲ್ಲಿಯೂ ಆತಂಕ ತುಂಬಿದೆ. ಇಂತಹ ಸಂದರ್ಭದಲ್ಲಿ ಯಾರು ತಾನೇ ಪಹಲ್ಗಾಮ್‌ಗೆ ಬರಲು ಸಜ್ಜಾಗುತ್ತಾರೆ ಹೇಳಿ?. ಆದರೆ ಇದು ನಿಮಗೆ ಗೊತ್ತಿರಲಿ, ಈ ಪಹಲ್ಗಾಮ್‌ಗೆ ಹೊರಡಲು ಮೊದಲು ಮುಂದಾಗಿದ್ದೇ ಮಹಿಳೆಯರು. ನಗರ ಪಾಲಿಕೆಗಳ ಮಹಿಳಾ ಸಿಬ್ಬಂದಿ ತಮ್ಮ ಮಕ್ಕಳೊಂದಿಗೆ ಕರ್ನಾಟಕ ರಾಜ್ಯೋತ್ಸವದಲ್ಲಿ ಭಾಗಿಯಾಗಲು ಮುಂದಾದರು. ಅದಕ್ಕೆ ಅಗತ್ಯವಾದ ಶುಲ್ಕವನ್ನೂ ಭರಿಸಿದ್ದರು. ಕಾಲಕ್ರಮೇಣ, ಪುರುಷರೂ ಮುಂದಾದರು. ಅಂತಿಮವಾಗಿ, ಪಹಲ್ಗಾಮ್‌ನಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವದಲ್ಲಿ 400ಕ್ಕೂ ಹೆಚ್ಚು ಮಂದಿ ಒಂದುಗೂಡಿದ್ದರು.

ಪಹಲ್ಗಾಮ್ ಕ್ಲಬ್ ಆ್ಯಂಡ್ ಕನ್ವೆಂಷನ್ ಸೆಂಟರ್– ಇದು ಜಮ್ಮು ಮತ್ತು ಕಾಶ್ಮೀರ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ (ಜೆಕೆಟಿಡಿಸಿ) ಕ್ಲಬ್. ಇಲ್ಲಿ ಸುಮಾರು 30ಕ್ಕೂ ಹೆಚ್ಚು ಕೊಠಡಿಗಳಿವೆ. ಏಪ್ರಿಲ್ 22ರಂದು ಉಗ್ರರ ದಾಳಿಗೆ ಬಲಿಯಾದ 26 ಮಂದಿಯ ದೇಹವನ್ನು ಇರಿಸಿದ್ದು ಇದೇ ಕ್ಲಬ್‌ನಲ್ಲಿ. ಕನ್ನಡಿಗರು ಕರ್ನಾಟಕ ರಾಜ್ಯೋತ್ಸವದ ಜೊತೆಗೆ ಮೃತರಾದವರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದೂ ಇದೇ ಕ್ಲಬ್‌ನಲ್ಲೇ. ‘‘ಪಹಲ್ಗಾಮ್‌ನಲ್ಲೇ ಕರ್ನಾಟಕ ರಾಜ್ಯೋತ್ಸವ ಹಾಗೂ ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕೆಂಬ ಯೋಜನೆ ರೂಪುಗೊಂಡಾಗ ‘ಪೆಹಲ್ಗಾಮ್ ಕ್ಲಬ್ ಆ್ಯಂಡ್ ಕನ್ವೆಂಷನ್ ಸೆಂಟರ್’ನಲ್ಲೇ ಕಾರ್ಯಕ್ರಮವಾಗಬೇಕೆಂದು ನಿರ್ಧರಿಸಿದೆವು. ಅದಕ್ಕಾಗಿ, ರಾಷ್ಟ್ರಪತಿ, ಪ್ರಧಾನಿ, ಮುಖ್ಯಮಂತ್ರಿ, ಸೇನಾ ಮುಖ್ಯಸ್ಥರು, ಪೊಲೀಸರು ಸೇರಿದಂತೆ ಎಲ್ಲರಿಗೂ ಪತ್ರ ಬರೆದು ಅನುಮತಿ ಪಡೆದಿದ್ದೆವು’’ ಎಂದು ಅಮೃತ್‌ರಾಜ್ ಮಾಹಿತಿ ನೀಡಿದರು.

ಅಲ್ಲಿ ಕಾರ್ಯಕ್ರಮ ನಡೆಸುವುದೂ ಅಷ್ಟು ಸುಲಭದ ಮಾತಾಗಿರಲಿಲ್ಲ. ಅದಕ್ಕೇ, ಪಹಲ್ಗಾಮ್‌ನ ಡಿವೈಎಸ್ಪಿ ಫಾರೂಕ್ ಅಹಮದ್, ಇನ್‌ಸ್ಪೆಕ್ಟರ್ ಪರ್ವೇಜ್ ಅಹಮದ್ ಅವರು ತಂಡದೊಂದಿಗೆ ಕನ್ನಡ ಕಾರ್ಯಕ್ರಮಕ್ಕೆ ಭದ್ರಕೋಟೆಯಾಗಿ ನಿಂತಿದ್ದರು.

ಕ್ಲಬ್ ಆವರಣದಲ್ಲಿ ನಿಂತು ನೋಡಿದರೆ, ಉಗ್ರರು ಅಟ್ಟಹಾಸ ಮೆರೆದ ಬೈಸರನ್ ಕಣಿವೆ


ಪ್ರವಾಸೋದ್ಯಮವನ್ನೇ ಜೀವಾಳವಾಗಿಸಿಕೊಂಡ ಪಹಲ್ಗಾಮ್ ಕಣಿವೆ